**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿತ್ತಾಪೂರ</u>**

**<u>ಸಿ.ಸಿ.ನಂ.362/2020</u>**

**<u>ಫಿರ್ಯಾದಿಃ-</u>** ಕರ್ನಾಟಕ ಸರ್ಕಾರದ ಪರವಾಗಿಃ ಮಾಡಬೂಳ ಪೊಲೀಸ್ ಠಾಣೆ.

**-:: ವಿರುದ್ಧ ::-**

**<u>ಆರೋಪಿಃ-</u>**

1. ವಿಠಾಬಾಯಿ ಗಂಡ ಅಶೋಕ ಪಾಟೀಲ,
   ವಃ 50 ವರ್ಷ, ಉಃ ಮನೆ ಕೆಲಸ,

2. ಮಲ್ಲಿಕಾರ್ಜುನ ತಂದೆ ಅಶೋಕ ಪಾಟೀಲ,
   ವಃ 30 ವರ್ಷ, ಉಃ ಕೂಲಿ ಕೆಲಸ,

ಎಲ್ಲರೂ ಸಾಃ ಅಶೋಕ ನಗರ, ತಾಃ ಚಿತ್ತಾಪೂರ
ಜಿಃಕಲಬುರಗಿ.

********

**-:: ದೋಷಾರೋಪಣೆ::-**

ನಾನು ಶ್ರೀ ಅಭಿಷೇಕ್ ರಾಮಚಂದ್ರ ಜೋಶಿ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಚಿತ್ತಾಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕ 20.07.2020 ರಂದು 7.30 ಎ.ಎಮ್ ಗಂಟೆ ಸುಮಾರಿಗೆ ಮುಡಬೂಳ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ, ಅಶೋಕ ನಗರದಲ್ಲಿನ ಸಾಕ್ಷಿ-1ನೇದ್ದವರು ಮನೆಯಲ್ಲಿ ಸಾಕ್ಷಿ-1 ನೇದ್ದವರು ಆರೋಪಿತರಾದ ನಿಮಗೆ ಅವರಿಗೆ ಕೊಡಬೇಕಾದ ಹಣ ಮರಳಿ ಕೊಡು ಅಂತಾ ಕೇಳಿದ್ದಕ್ಕೆ ಆರೋಪಿತರಾದ ನೀವು ಸಾಕ್ಷಿ-1ನೇದ್ದವರ ಜೋತೆ ಜಗಳ ತೆಗೆದು, ಸಾಕ್ಷಿ-1 ನೇದ್ದವರನ್ನು ತಡೆದು ಹಿಡಿದು ಅವರನ್ನು ಮುಂದೆ ಹೋಗದಂತೆ ಅಕ್ರಮವಾಗಿ ತಡೆಗಟ್ಟಿದ್ದು, ಇದು ಭಾರತ ದಂಡ ಸಂಹಿತೆ ಕಲಂ 341 ಸಹವಾಚಕ 34 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ಎರಡನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಏಕೊದ್ದೇಶದಿಂದ ಸಾಕ್ಷಿ-1ನೇದ್ದವರ ಜೋತೆಗೆ ಜಗಳ ತೆಗೆದು, ಆರೋಪಿತರಾದ ನೀವು ಸಾಕ್ಷಿ-1 ನೇದ್ದವರಿಗೆ ಏ ರಂಡಿ ಮಗಳೆ ನಿನಗೆ ಯಾವ ಮನೆ, ಹಣ ಕೊಡಬೇಕು ನೀನು  ಹೀಗೆಲ್ಲಾ ಮನೆಯ ಹತ್ತಿರ ಬಂದು ನನಗೆ ತೋದರೆ ಕೊಡುತ್ತಿ ಅಂತಾ  ಅವಾಚ್ಯ ಶಬ್ದಗಳಿಂದ ಬೈದಿದ್ದು, ಇದು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ 34 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ನಾಲ್ಕನೆಯದಾಗಿ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಏಕೊದ್ದೇಶದಿಂದ ಸಾಕ್ಷಿ-1ನೇದ್ದವರ ಜೋತೆಗೆ ಜಗಳ ತೆಗೆದು, 1ನೇ ಆರೋಪಿತನಾದ ನೀನು ಸಾಕ್ಷಿ-1 ನೇದ್ದವರ ತಲೆಯ ಕೂದಲು ಹಿಡಿದು ಜಗ್ಗಾಡಿ ಕೈಯಿಂದ ಬೆನ್ನಿನ ಮೇಲೆ ಮತ್ತು ಹೊಟ್ಟೆಯಲ್ಲಿ ಹೊಡೆದು ಜೋರಾಗಿ ನೂಗಿಸಿಕೊಟ್ಟದ್ದರಿಂದ ಸಾಕ್ಷಿ-1 ನೇದ್ದವರ ರೋಡಿನ ಮೇಲೆ ಬಿದ್ದಾಗ ತಲೆಗೆ ಕಲ್ಲು ಬಡಿದು ರಕ್ತಗಾಯವಾಗಿರುತ್ತದೆ, ಇದು ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ಕೊನೆಯದಾಗಿ ಮೇಲೆ ಹೇಳಲಾದ ದಿನ ಸಮಯ ಮತ್ತು ಸ್ಥಳದಲ್ಲಿ,  ಆರೋಪಿತರಾದ ನೀವು ಸಮಾನ ಏಕೊದ್ದೇಶದಿಂದ ಸಾಕ್ಷಿ-1ನೇದ್ದವರ ಜೋತೆಗೆ ಜಗಳ ತೆಗೆದು, 1 ವತ್ತು 2ನೇ ಆರೋಪಿತರಾದ ನೀವು  ಸಾಕ್ಷಿ-1 ನೇದ್ದವರಿಗೆ ಇನ್ನೊಮ್ಮೆ ನಮಗೆ ಮನೆ ಮತ್ತು ಹಣ ಕೊಡು ಅಂತಾ ಕೇಳಿದರೆ ನಿಮಗೆ ಜೀವ ಸಹಿತ ಬೀಡುವುದಿಲ್ಲ ಅಂತಾ  ಜೀವದ ಬೇದರಿಕೆ ಹಾಕಿದ್ದು, ಇದು ಭಾರತ ದಂಡ ಸಂಹಿತೆ ಕಲಂ 506  ಸಹವಾಚಕ 34 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

**<u>ಪೌ.ಪ್ರ.ಸಂ.ಪ್ರ.240(2) ರಡಿಯಲ್ಲಿ ಆರೋಪಿತರ ಹೇಳಿಕೆ</u>**

ಪ್ರಶ್ನೆ:1ಃ ಈಗ ಓದಿ ಹೇಳಿದ ಆರೋಪಣೆ ಅರ್ಥವಾಗಿದೆಯೇ?

ಉಃ ಆಃ1 ಆಃ2

ಪ್ರಶ್ನೆ:2ಃ ಹಾಗಿದ್ದಲ್ಲಿ ನಿಮ್ಮ ಸಮಜಾಯಿಷಿಕೆ ಏನು? ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ

ವಿಚಾರಣೆಯಾಗಬೇಕು?

ಉಃ ಆಃ1 ಆಃ2

ದಿನಾಂಕಃ 22.01.2026 ರಂದು ಅಪರಾದಿಗೆ/ಗಳಿಗೆ ತಿಳಿದಿರುವ ಭಾಷೆಯಾದ ಕನ್ನಡದಲ್ಲಿ ನನ್ನ ಸಮಕ್ಷಮ ಓದಿ ಹೇಳಿ ಅಭಿಲೇಖಿಸಿರುವ ಈ ಹೇಳಿಕೆ ಅವರ/ನ ಸರಿಯಾದ ಒಕ್ಕಣೆ ಎಂದು ದೃಢೀಕರಿಸುತ್ತೇನೆ.

**ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂ. ಚಿತ್ತಾಪೂರ.**